ಗಾಡಿಯ ಹಿಂಭಾಗದಲ್ಲಿ ಹೊಳೆಯುವ ಲೋಹದ ಹಿಡಿಕೆಯನ್ನು ತಿರುಗಿಸಿದ. ಹೊರಗಿಳಿದುದು ಮನುಷ್ಯನಲ್ಲ; ಒಂದು ಮುಸುಕು. ಕಡು ಹಸಿರು ಬಣ್ಣದ ಒಂದು ಮುಸುಕು. ಕೆಂಪಗಿನ ಪುಟ್ಟ ಪಾದಗಳು. ಬಿಳಿಚಿದ ನೀಳ ಬೆರಳುಗಳು ಮಾತ್ರ ಕಾಣಿಸಿದುವು. ಮನುಷ್ಯರದ್ದಲ್ಲದೆ ಯಾವುದೊ ಲೋಕದ ಕುರಿತು ಮಗ ಯೋಚಿಸತೊಡಗಿದ. ನರೆಗಡ್ಡದ ಮುದುಕ ಗಾಡಿಯವನು. ಬೆಂಕಿಯುಗುಳುವ ಕುದುರೆ. ಹಸಿರ ಮುಸುಕು ಎಲ್ಲವೂ ಈ ಲೋಕದಿಂದ ಬರುವುದಲ್ಲವೆಂದು ಅನ್ನಿಸಿತು. ಕಾರಣವಿಲ್ಲದ ಭಯವೊಂದು ಮನಸ್ಸಿನಲ್ಲಿ ವ್ಯಾಪಿಸಿತು.

ತೋಟಮಾಲಿಯ ಮುಂದೆ ಆ ರೂಪ ನಿಂತಿತು. ಮಾತನಾಡಿತೋ ಎಂಬುದು ತಿಳಿಯಲಿಲ್ಲ. ತೋಟಮಾಲಿ ಒಳಗೆ ಹೋಗುವ ಬಾಗಿಲಿನೆಡೆಗೂ ಮೇಲಕ್ಕೂ ಬೆಟ್ಟುಮಾಡಿ ತೋರಿದ.

ಮಗ ಕಿವಿಗೊಟ್ಟು ಆಲಿಸುತ್ತ ನಿಂತ.

ಏಣಿ ಮೆಟ್ಟಿಲುಗಳಿಂದ ಮೃದುವಾದ ಶಬ್ದಗಳು ಕೇಳಿಸಿದವು. ರೋಗ ಶಯ್ಯೆಯ ಅಸುಖಕರವಾದ ನೆನಪುಗಳಾಗುತ್ತಿರುವ ಆ ಕೋಣೆಯ ಗಾಳಿಯಲ್ಲಿ ಬೆಲೆಬಾಳುವ ಅತ್ತರಿನ ಗಂಧ ವಿಸ್ತರಿಸಿತು. ಆತ ತಿರುಗಿ ನೋಡಿದ. ಕೆಂಪಗಿನ ಪಾದಗಳನ್ನು ಊರುತ್ತ ಮುಸುಕು ತೊಟ್ಟ ಮಹಿಳೆ ಮಂಚದ ಕಾಲುಗಳೆಡೆಗೆ ಬಂದು ನಿಂತರು. ಮುಖದ ಬಲೆಗಳ ಕಿಂಡಿಗಳ ಮೂಲಕ ಕರಿಮೀನುಗಳ ಹೊಳಪು ಕಾಣಿಸಿತು. ಮಗ ಮತ್ತೆ ನೋಡಲಿಲ್ಲ. ತಲೆಯ ಭಾಗದಲ್ಲಿ ಕುಷನ್ ಹಾಕಿದ ಬೆತ್ತದ ಕುರ್ಚಿಯಲ್ಲಿ ಕುಳಿತ್ತಿದ್ದ ಅಮ್ಮ ಮಿಸುಕಾಡಲಿಲ್ಲ. ಅಮ್ಮನ ಕಣ್ಣುಗಳು ಅರಳಿದ್ದುವು. ಹೊಳೆಯುತ್ತಿದ್ದುವು. ಮಾರ್ಬಲ್ ಹೊದಿಸಿದ ಚಿಕ್ಕ ಸ್ಟೂಲಿನ ಮೇಲೆ ಆ ರೂಪ ಕುಳಿತಿತು.

ಅಪ್ಪ, ಸ್ಟೂಲ್ ಸದ್ದಾದಾಗ ಕಣ್ಣು ತೆರೆದು ನೋಡಿದರು. ದಣಿದ ಕಣ್ಣುಗಳು ಮುಸುಕಿನ ಮುಖದ ಬಲೆಯ ಕಂಡಿಗಳ ಮೂಲಕ ತಲುಪಿದಾಗ ಹೊಳೆದುವು.

ಕೆಂಪಗಿನ ಪಾದಗಳತ್ತ ಮಗ ನೋಡುತ್ತ ನಿಂತ. ಕಣ್ಣುಗಳು ಮೇಲೆತ್ತಲು ಆತನಿಗೆ ಭಯವಾಗಿತ್ತು. ಕೆಲಸದಾಳು ಬಿಸಿನೀರು ತಂದಿಟ್ಟು ಹೋದ. ಡಾಕ್ಟರು ಬರುವ ಹೊತ್ತಾಗಿಯೂ ಬಂದಿರಲಿಲ್ಲ. ಕರೆ ಕಳುಹಿಸುವುದು ಒಳ್ಳೆಯದು. ಆ ಕೋಣೆಯ ಒಳಗೆ ನಿಂತು ಮಾತನಾಡುವುದು ಮಗನಿಗೆ ಇಷ್ಟವಾಗಲಿಲ್ಲ. ಆತ ಹೊರಗೆ ಬಂದು ಕೆಲಸದಾಳಿಗೆ ಸೂಚಿಸಿದ.

ಅಪ್ಪನ ಸ್ನೇಹಿತರಲ್ಲಿ ಹಲವರೂ ಬಂದರು. ಅನುಕಂಪ ಪ್ರಕಟಿಸಿ ಹೊರಟು ಹೋದರು.

ಹಗಲಿಡೀ ನರೆತ ಗಡ್ಡ ಸವರುತ್ತ, ಹುಕ್ಕಾ ಸೇದುತ್ತ ಗಾಡಿಯ ಮುದುಕ ಮುಂಬಾಗಿಲಿನಲ್ಲಿ ತಲೆ ತಗ್ಗಿಸಿ ಕುಳಿತಿರುವುದು ಕಾಣಿಸಿತು.

ಔಷಧಿ ಕೊಡಬೇಕಾದ ಹೊತ್ತಲ್ಲಿ ಮಾತ್ರ ಮಗ ರೋಗಿಯ ಕೋಣೆಗೆ ಹೋದ.

ಊಟ ತಂದಿರಿಸಿದ್ದೇನೆ ಎಂದು ಪರಿಚಾರಕನು ತಿಳಿಸಿದಾಗ ಅಮ್ಮ ಹೊರಗೆ ಬಂದರು. ಬರುವಾಗ ಮುಂಭಾಗದ ಮಾರ್ಬಲ್ ಸ್ಟೂಲಿನತ್ತ ನೋಡಲಿಲ್ಲ. ಮರಳಿ ಬಂದು ಬೆತ್ತದ ಕುರ್ಚಿಯಲ್ಲಿ ಕುಳಿತುಕೊಳ್ಳುವಾಗಲೂ ನೋಡಲಿಲ್ಲ. ಕೆಳಗೆ ಪರಿಚಾರಕ, ತೋಟಗಾರ, ಡ್ರೈವರು ಪರಸ್ಪರ ಪಿಸುಗುಟ್ಟುತ್ತಿದ್ದರು. ತೋಟಗಾರ ಮುಂಬಾಗಿಲಿಗೆ ಹೋಗಿ ಸಮೀಪ ನಿಲ್ಲುವುದು ಸ್ವಲ್ಪ ಹೊತ್ತು ಕಳೆದು ಹಿಂತಿರುಗಿ ಬಂದುದನ್ನು ಮಗ ನೋಡಿದ.

ಅಮ್ಮನ ಮುಖವನ್ನು ನೋಡುವಾಗಲೆಲ್ಲ ಮಗ ನಿಶ್ಶಬ್ದವಾದ ಪ್ರಶ್ನೆಯೊಂದನ್ನು ಓದುತ್ತಿದ್ದ.

ಬಿಸಿಲು ಮಂದವಾದಾಗ ಮುಸುಕು ತೊಟ್ಟ ಮಹಿಳೆ ಹೊರಗೆ ಹೋದಳು, ಯಾರೂ ದಾರಿ ತೋರಿಸಲಿಲ್ಲ, ಮೆಲ್ಲನೆ ಮೆಟ್ಟಲಿಳಿದು ಹೋಗುವುದನ್ನು ಗಾಡಿ ಏರಿ ಕುಳಿತುಕೊಳ್ಳುವುದನ್ನು ಹಲವರು ಕಂಡರು. ಕಡ್ರಗಿನ ಕುಳ್ಳ ಕುದುರೆ ಕೆನೆಯುತ್ತ ಓಡಿದಾಗ ಆ ಘಟನೆ ಒಂದು ಕನಸಿನಂತೆ ನಂಬಲಸಾಧ್ಯವಾಗಿ ಬದಲಾಯಿತು.

ರಾತ್ರಿಯಲ್ಲಿ ಔಷಧಿಗಳ ಗಂಧವೂ ಬೆಡ್‌ರೂಂ ಲ್ಯಾಂಪಿನ ನಸು ಪ್ರಕಾಶವೂ ಇರುವ ಕೋಣೆಯ ಒಳಗೆ ಹೋದಾಗ ಮಗನ ಕಣ್ಣುಗಳು ಆ ಮಾರ್ಬಲ್ ಸ್ಟೂಲಿನಡೆಗೆ ನಿಮಿಷಗಳ ಕಾಲ ಸಂಚರಿಸಿದುವು. ಅಮ್ಮ ಅದನ್ನು ಗಮನಿಸಿದರು. ಗಾಳಿಯಲ್ಲಿ ಔಷಧಿಗಳ ರೂಕ್ಷವಾದ ಗಂಧದೊಡನೆ ಅತ್ತರಿನ ಪರಿಮಳವೂ.

ಮರುದಿನ ಬೆಳಗ್ಗೆ ಸುಮ್ಮನೆ ನಿಂತಿದ್ದಾನೆಂಬ ಭಾವದಲ್ಲಿ ಎತ್ತರದ ಕಿಟಕಿಯ ಬಳಿ ಬಂದು ನಿಂತ. ಆತ ಗಮನವಿರಿಸಿದ್ದ. ದೂರದಿಂದ ಕುದುರೆಗಾಡಿಯ ಗಂಟಾನಾದ ಕೇಳಿಸುತ್ತಿದೆಯಾ?